॥ ಶ್ರದ್ಧಾ ಹಿ ಪರಮಾ ಗತಿಃ ॥

# ಚಳುವಳಿಗಳು ಮತ್ತು ಹೊಸಗನ್ನಡ ಸಾಹಿತ್ಯ

## ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಂಡಿತವಾದ ಲೇಖನಗಳ ಸಂಕಲನ




ಡಾ. ಕೆ. ಪಿ. ನಾರಾಯಣಪ್ಪ
ಸಂಪಾದಕರು

ಡಾ. ಬಿ. ಆರ್. ಪರಿಣೀತಾ
ಪ್ರಧಾನ ಸಂಪಾದಕರು

ಕನ್ನಡ ವಿಭಾಗ

ನ್ಯಾಷನಲ್ ಕಾಲೇಜು (ಸ್ವಾಯತ್ತ)
ನ್ಯಾಕ್ 'ಎ' ಶ್ರೇಣಿ ಮಾನ್ಯತೆ ಪಡೆದಿದೆ
ಜಯನಗರ, ಬೆಂಗಳೂರು – 560 070

Proceedings of the One Day National Level Seminar on " **Chaluvaligalu Mattu Hosagannada Sahithya**" organized by **National College (Autonomous)**, Jayanagar, Bengaluru - 560 070.
**Year of Publication : 1st Edition 2018**

**Volume : 1**
**Copyright © [2018] [National College, Jayanagar, Bengaluru-70] All Rights Reserved.**

No Part of this book may be reproduced or transmitted in any form or by any means, electronic or mechanical, including photocopying, recording or by any information storage and retrieval system without permission in writing from the publisher.

Size : A4
Paper : 75 GSM
Binding : Paper Back
No. of Pages : 400
No. of Copies : 150
ISBN : 978-81-933447-7-4
Price : Rs. 525/-

**Published by:**
The Principal
National College
Jayanagar, Bengaluru - 560 070.

**Chief - Editor**
Dr. B. R. Parineetha

**Editor**
Dr. K. P. Narayanappa

**Co-Editiors**
Dr. B. Papanna
Prof. V. Savitha
Prof. R. Ravikumara

**Printed at:**
Sneha Printers
Bangalore

**Disclaimer**

Although every precaution has been taken in the preparation of this book, the publisher and author assume no responsibility for errors or omissions. Nor is any liability assumed for damage resulting from the use of the information contained herein.

16. ಹೊಸಗನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆಯ ಹೆಜ್ಜೆ ಗುರುತುಗಳು
ಡಾ.ಪ್ರತಿಮಾ ವಿಜಯ್ 59

17. ಹೊಸಗನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ
ಪ್ರೊ. ಸರಸ್ವತಿ. ಆರ್ 61

18. ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ ಸಂವೇದನೆ
ರವಿಕುಮಾರ ಆರ್. 65

19. ಹೊಸಗನ್ನಡ ಸಾಹಿತ್ಯ : ಸ್ತ್ರೀ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆ
ಡಾ. ಸುಮ ಆರ್. 69

20. ಹೊಸಗನ್ನಡ ಸಾಹಿತ್ಯದಲ್ಲಿ ಸ್ತ್ರೀವಾದಿ ಚಿಂತನೆಯ ಹೆಜ್ಜೆ ಗುರುತುಗಳು :
ಕನ್ನಡ ಕಾದಂಬರಿಗಳಲ್ಲಿ ಮಹಿಳಾ ಸಂವೇದನೆ
ಪ್ರೊ. ಪ್ರೇಮಾವತಿ ಎಸ್. ಕೆ. 72

21. ಮಹಿಳಾ ಚಳವಳಿಯ ಪ್ರಭಾವದಲ್ಲಿ ಬಿ.ಟಿ.ಲಲಿತಾ ನಾಯಕ್ ಅವರ ಕಾವ್ಯ
ಡಾ. ಎ.ಮುನಿಶಾಮಪ್ಪ 75

22. ಯಯಾತಿಯ ಪುರುಷತ್ವವೂ : ಚಿತ್ರಲೇಖೆಯ ಸ್ತ್ರೀತ್ವವೂ
ಡಾ. ವೆಂಕಟೇಶ ಹೆಚ್., ಶ್ರೀಮತಿ ಜ್ಯೋತಿ ಎಸ್. 79

23. ಕರ್ನಾಟಕ ಏಕೀಕರಣ ಚಳುವಳಿ ಮತ್ತು ಕನ್ನಡ ಸಾಹಿತ್ಯ
ಶ್ರೀ ಶಿದ್ಲಿಂಗಪ್ಪ ಎಸ್. ಜಿ, ಶ್ರೀ ಸಿ. ಎಂ. ಮಾಮನಿ 83

24. ಕನ್ನಡ ಸಿನಿಮಾ ಮತ್ತು ಜನ ಚಳುವಳಿ
ಕೆ. ಮುರಳಿಮೋಹನ್ 88

25. ಹೊಸಗನ್ನಡ ಸಾಹಿತ್ಯಕ್ಕೆ ಸ್ವಾತಂತ್ರ್ಯ ಚಳುವಳಿಯ ಪ್ರಭಾವ
ಬಾಲರಾಜು ಬಿ. ವಿ 93

26. ಕುವೆಂಪು, ಪುತಿನ, ಕೆಎಸ್‌ನ ಕಾವ್ಯದಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆ.
ಡಾ|| ರೂಪ ಎಂ.ಪಿ. 96

27. ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷೀಯ ಭಾಷಣಗಳಲ್ಲಿ ಏಕೀಕರಣದ ಧ್ವನಿ
(ಕರ್ನಾಟಕ ಏಕೀಕರಣದವರೆಗೆ)
ಗಂಗಾಧರ ಬಿ ಎಂ 102

28. ಸ್ವಾತಂತ್ರ್ಯ ಚಳುವಳಿಯಲ್ಲಿ ರೂಪಾಂತರ ನಾಟಕಗಳ ಪಾತ್ರ
ಪುನೀತ್ ಕುಮಾರ್ 107

29. ಹೊಸಗನ್ನಡ ಸಾಹಿತ್ಯದ ಮೇಲೆ ಸ್ವಾತಂತ್ರ್ಯ ಚಳುವಳಿಯ ಪ್ರಭಾವ
ಪ್ರೊ. ಸಂಧ್ಯಾ ಹೆಗಡೆ 109

30. ಏಕೀಕರಣ ಚಳುವಳಿ ಮತ್ತು ಸಾಹಿತ್ಯ
ಡಾ. ರಾಮಯ್ಯ 110

31. ಸ್ವಾತಂತ್ರ್ಯ ಚಳುವಳಿಗೆ ಹೊಸಗನ್ನಡ ಸಾಹಿತ್ಯದ ಪ್ರೇರಣೆ
ಡಾ. ಎಸ್.ಬಿ. ರಾಠೋಡ 116

32. ಸ್ವಾತಂತ್ರ್ಯ ಚಳುವಳಿಗೆ ಹೊಸಗನ್ನಡ ಸಾಹಿತ್ಯದ ಪ್ರೇರಣೆ
ಪ್ರೊ. ಸಿ. ವಿ. ಶೈಲಜಾ 119

# ಸ್ವಾತಂತ್ರ್ಯ ಚಳುವಳಿಗೆ ಹೊಸಗನ್ನಡ ಸಾಹಿತ್ಯದ ಪ್ರೇರಣೆ

**ಡಾ. ಎಸ್.ಬಿ. ರಾಠೋಡ** *

ಸ್ವಾತಂತ್ರ್ಯವೇ ನಮ್ಮ ಹಕ್ಕು
ಸಹಿಸಲಾರೆವು ಪರರ ಸೊಕ್ಕು
ನಾಡ ಸಂಕೋಲೆಯನ್ನು
ಕಳಚಲು ನೀವ್ ಸಿದ್ದರಾಗಿ
ಎಂಬಂತಹ ಕರೆಯ ಕೊಟ್ಟು
ದಮನಿತರಿಗೆ ದನಿಯನಿತ್ತ । ದಮನಿತರಿಗೆ ದನಿಯನಿತ್ತ
ಮೈಲಾರ ಮಹಾದೇವನೇ ನಿನಗೊಂದನೆ
( ಹೋರಾಟದ ಹಾಡು )

ಸ್ವಾತಂತ್ರ್ಯದ ಕಿಚ್ಚು ಕನ್ನಡದ ಮೇಲೆ ಇಟ್ಟ ಪ್ರೀತಿ ಇಂಗ್ಲೀಷ ಮತ್ತು ಇಂಗ್ಲೀಷರನ್ನು ವಿರೋಧಿಸುವ ಧೈರ್ಯ ಕನ್ನಡ ಸಾಹಿತಗಳ ಸಾಹಿತ್ಯದಲ್ಲಿ ಕಾಣುತ್ತೇವೆ. ಬೇರೆಯವರು ನಮ್ಮ ಮೇಲೆ ದಬ್ಬಾಳಿಕೆ ಮಾಡುವದು ಸಾಹಿತಿಗಳಿಗೂ ನುಂಗಲಾರದ ತುತ್ತಾಗಿತ್ತು. ಅದಕ್ಕೆ ಅವರು ಹೇಳಿದ್ದು 'ಸ್ವಾತಂತ್ರ್ಯವೇ ನಮ್ಮ ಹಕ್ಕು, ಸಹಿಸಲಾರೆವು ಪರರ ಸೊಕ್ಕು' ದೇಶದ ಸಂಕೋಲೆಯನ್ನು ಕಳಚಲು, ಈ ಮೇಲಿನ ಕವಿತೆಯ ಸಾಲುಗಳೇ ಸಾಕ್ಷಿಯಾಗಿ ನಿಲ್ಲುತ್ತವೆ.

ಕುವೆಂಪುರವರು ಕೂಡ ತಮ್ಮ ಹಲವಾರು ಕವನಗಳಲ್ಲಿ, ಹಲವು ಕಡೆ ಮಾಡಿದ ಭಾಷಣಗಳಲ್ಲಿ ಇಂಗ್ಲೀಷ ಮತ್ತು ಇಂಗ್ಲೀಷರನ್ನು ತೀವ್ರವಾಗಿ ವಿರೋಧಿಸಿರುವದನ್ನೂ ಕಾಣುತ್ತೇವೆ. 'ಇದು ನಿನ್ನ ಭಾಷೆ, ಇದು ನಿನ್ನ ದೇಶ ಭಾಷೆ, ಇದು ಸಾವಿರಾರು ವರ್ಷಗಳ ಸುಪುಷ್ಠ ಭಾಷೆ, ಇದು ಮಹಾಕವಿಗಳನ್ನೂ, ಶಿಲ್ಪಿಗಳನ್ನೂ, ರಾಜಾಧಿರಾಜರನ್ನೂ, ವೀರಾಧಿ ವೀರರನ್ನೂ, ರಷುಋಷಿ ದಾರ್ಶನಿಕರನ್ನು ಹಡೆದಿರುವ ಭಾಷೆ ! ಈ ಭಾಷೆಗಾಗಿ ಕೈಯೆತ್ತು: ನಿನ್ನ ಕೈ ಕಲ್ಪವೃಕ್ಷವಾಗುವದು. ಈ ಭಾಷೆಗಾಗಿ ಕೊರಳೆತ್ತು: ಅಲ್ಲಿ ಪಾಂಚಜನ್ಯ ಮೊಳಗುವುದು. ನನ್ನ ಮೊಲೆಹಾಲಿನೊಂದಿಗೆ ಬೇರತ ಭಾಷೆಗಾಗಿ ಕಿರುಬೆರಳೆತ್ತಿದ್ದರೂ ಸಾಕು ಅದು ಗೋವರ್ಧನ ಗಿರಿಯಾಗುವದು. ಹೀಗೆ ಹಲವಾರು ಸಾಹಿತಿಗಳು ತಮ್ಮ ಸಾಹಿತ್ಯ ಕೃತಿಗಳ ಮೂಲಕ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮಕ್ಕಿದ್ದು ಕಾಣುತ್ತೇವೆ.

ಬ್ರಿಟಿಶ್ ಸಾಮ್ರಾಜ್ಯದ ಅತ್ಯೋನ್ನತ ಕಾಲದಲ್ಲಿ ಕನ್ನಡ ಸಾಹಿತ್ಯ ಹೊಸ ರೂಪವನ್ನು ಪಡೆದುಕೊಳ್ಳುವುದರಲ್ಲಿ ಯಶಕಂಡಿತು. ಮೊದಮೊದಲು ಭಾಷಾಂತರಗಳಿಂದ ಪ್ರಾರಂಭವಾದ ಸಾಹಿತ್ಯ ಕ್ರಮೇಣ ಸ್ವಾತಂತ್ರರೂಪವನ್ನು ಪಡೆದುಕೊಂಡಿತು. ಇದು ಎಲ್ಲರೂ ಒಪ್ಪಿಕೊಂಡ ಐತಿಹಾಸಿಕ ಸಂಗತಿ. ಮೊದಲನೆಯದಾಗಿ ಹೊಸ ಸಾಹಿತ್ಯ ಸಾಮ್ರಾಜ್ಯವನ್ನು ಹೊಗಳಲಿಲ್ಲ, ಧಿಕ್ಕರಿಸಲೂ ಇಲ್ಲ. ಇದು ತೋರಿಕೆಗೆ ಕಾಣುವ ಸಂಗತಿ. ಇಂತಹ ಸಂದರ್ಭದಲ್ಲಿ ಬ್ರಿಟಿಷರಿಗೆ ತೊಡೆತಟ್ಟಿ ನಿಂತ ಸಾಹಿತಿಗಳಲ್ಲಿ ಬಸವರಾಜ ಕಟ್ಟಿಮನಿರವರೊಬ್ಬರು. ಕಟ್ಟಿಮನಿಯವರು ಹಲವಾರು ಪತ್ರಿಕೆಗಳಲ್ಲಿ ಕೆಲಸ ಮಾಡಿದರೂ ಅವರ ಅಲೆದಾಟ ಹಾಗೆಯೇ ಮುಂದೊರೆದ್ದಿತ್ತು. ಈ ತಿರುಗಾಟದಲ್ಲಿ ಸಮಾಜದ ಮುಸುಕಿನಲ್ಲಿ ಜರಗುವ ಕಪಟತನ, ಮೋಸ, ವಂಚನೆ, ಡಾಂಬಿಕತೆ, ಬಂಡವಾಳಶಾಹಿಯಿಯ ರೂಪದ ದರ್ಶನವಾಗುತ್ತಿತ್ತು. ಸುಭದ್ರ ಜಿವನಕ್ಕಾಗಿ ಅಲೆದಾಟ, ಬದುಕಿನ ಅತಂತ್ರತೆ ಮತ್ತು ಹಸಿವಿನ ವಾಸ್ತವತೆ ದರ್ಶನವಾಗುತ್ತಿದ್ದವು. ಹೋರಾಟದ ಕಿಚ್ಚು ಹಾಗೆ ಬಿಡಲಿಲ್ಲ ಚಲೆಜಾವ ಚಳುವಳಿಯಲ್ಲಿ ಧುಮಕಿಸಿತು. ಚಲೆಜಾವ್ ಚಳುವಳಿಯ ಜೈಲುವಾಸ ಸ್ವಾತಂತ್ರ್ಯಯೋಧರ ಹೋರಾಟದ ಚಿತ್ರಣ ಮನೆ ಮಾಡಿತು. ತಮ್ಮ ಅಲೆಮಾರಿಯ ಜೀವನಾನುಭವ ವಾಸ್ತವಿಕ ಪ್ರಜ್ಞೆಯಿಂದ 1945 ರಲ್ಲಿ "ಕಾರವಾನ್" ಎಂಬ ಪ್ರಥಮ ಕಥಾಸಂಕಲನ ಪ್ರಕಟವಾಯಿತು.

"ಕಾರವಾನ್" ಉತ್ತರ ಕರ್ನಾಟಕದಲ್ಲಿ ಭೀಕರ ಬರಗಾಲದ ಬವಣೆಯಿಂದ ಗುಳೆ ಹೋಗುವರ ಹೃದಯ ವಿದ್ರಾವಕ ಚಿತ್ರಣಗಳು ಬೆವರಿನಲ್ಲಿ ಅದ್ದಿ ಬರೆದ ಲೇಖನಗಳಾಗಿದ್ದವು. ಪ್ರಗತಿಶೀಲ ಲೇಖಕರ ಗುಂಪಿನಲ್ಲಿರದಿದ್ದರೂ ಪ್ರಗತಿಶೀಲ ಕಥೆಗಾರರೆನ್ನುವ ಪಟ್ಟಿ ಕಟ್ಟಿಕೊಂಡರು. 'ಆಗಷ್ಟ್ ಒಂಬತ್ತು' ಸ್ವಾತಂತ್ರ್ಯ ಚಳುವಳಿಯ ಹಿನ್ನೆಲೆಯಲ್ಲಿ ರಚಿತಗೊಂಡ ಕಥಾಸಂಕಲನ ಸಮಕಾಲಿನ ಸ್ವಾತಂತ್ರ್ಯ ಹೋರಾಟದ ವಾಸ್ತವ ಚಿತ್ರಣಗಳು ಮತ್ತು ತಮ್ಮ ಜೀವನ ಮತ್ತು ಕಲೆಯಲ್ಲಿ ಕೊಟ್ಟಿದ್ದಾರೆ. "ಧನಿಕರಿಗೆ ದೀಪಾವಳಿ, ದರಿದ್ರರಿಗೆ ದೀವಾಳಿ!" ದೀವಳಿಗೆ ಹಬ್ಬದಲ್ಲಿ ಧನಿಕರ ಮನೆಗಳೆದರು ಬೆಳಗುವ ಹಣತೆಗಳಲ್ಲಿ ಸುಡುವರು ನೆತ್ತರು ಎಂದು ಶೋಷಣೆಯ ವೀರುದ್ಧ ಕತ್ತಿ ಝುಳಪಿಸುತ್ತಾರೆ. "ಸೆರೆಯಿಂದ ಹೊರಗೆ" ಕಥೆಯು ಪ್ರಸಾದ ನಿಲಯಗಳಲ್ಲಿಯ ಅವ್ಯವಸ್ಥೆಯ ಮೇಲೆ ಬೆಳಕು ಚಲ್ಲುತ್ತದೆ. 'ಮೋಹದ ಬಲೆಯಲ್ಲಿ' 'ಜರತಾರಿ ಜಗದ್ಗುರು' ಕಾದಂಬರಿಗಳಲ್ಲಿ ಧರ್ಮಗುರುಗಳ ವಿಷಯ ಲಂಪಟತನ, ಡಾಂಬಿಕತೆ, ಸಮಾಜದ ಶೋಷಣೆ ಹೊರಗೆಳೆದು ಸಮಾಜದಲ್ಲಿ ಸಂಚಲನವುಂಟು ಮಾಡಿದರು. ಸ್ವಾಮಿಗಳ ಕಡುವಿರೋಧಿಯೆಂದೇ ಗುರುತಿಸಿಕೊಂಡ ಕಟ್ಟಿಮನಿಯವರು ನಾಗನೂರು

* ಮುಖ್ಯಸ್ಥರು ಕನ್ನಡ ವಿಭಾಗ, ಎಸ್.ಎಸ್. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ – 586 205. , ಮೊ.ನಂ. 9743322956